# ಸಹೋದರನ  ಹೆಂಡತಿಗೆ ಚುಡಾಯಿಸಿದ ಯುವಕನನ್ನು ಬರ್ಬರವಾಗಿ ಕೊಲೆ ಮಾಡಿದ ಆರೋಪಿತರ ಬಂದನ

## ಪ್ರತಿಕಾ ಪ್ರಕಟಣೆ

ದಿನಾಂಕ: 20/06/2021 ರಂದು ಮೃತ ಶಿವಪುತ್ರ ತಂದೆ ಹಣಮಂತರಾಯ ಪಗಡೆ ವಯಾ: 23 ವರ್ಷ ಜಾ: ಲಿಂಗಾಯತ ಉ: ಇಂಜಿನಿಯರ್ ಸಾ: ಭೋದನ ಗ್ರಾಮ ತಾ:ಆಳಂದ ಇತನಿಗೆ ಯ್ಯಾರೋ ದುಷ್ಕರ್ಮಿಗಳು ಯಾವುದೋ ಉದ್ದೇಶದಿಂದ ಅಪಹರಣ ಮಾಡಿಕೊಂಡು ಸೈಯದ ಚಿಂಚೋಳಿ–ಅಷ್ಟಗಾ ಗ್ರಾಮದ ರೋಡಿಗೆ ದಿನಾಂಕ 19/06/2021 ರ ರಾತ್ರಿ ಸಮಯದಲ್ಲಿ ಕೊಲೆ ಮಾಡಿ ಪೆಟ್ರೋಲ ಹಾಕಿ ಸುಟ್ಟು ಸಾಕ್ಷಿ ನಾಶ ಮಾಡಿರುತ್ತಾರೆ ಅಂತಾ ಮೃತನ ತಂದೆ ಹಣಮಂತರಾಯ ಪಗಡೆ ಸಾ: ಭೋಧನ ಇವರು ದೂರು ಸಲ್ಲಿಸಿದರ ಸಾರಾಂಶದ ಮೇಲಿಂದ ಗ್ರಾಮಿಣ ಪೊಲೀಸ್ ಠಾಣೆ ಗುನ್ನೆ ನಂ 118/2021 ಕಲಂ 302 201 ಐಪಿಸಿ ಕೇಸು ದಾಖಲಿಸಿಕೊಂಡು ತನೀಖೆ ಕೈಗೊಂಡಿದ್ದು ಇರುತ್ತದೆ.

ಈ ಕೊಲೆಯಾದ ಶಿವಪುತ್ರ ತಂದೆ ಹಣಮಂತರಾಯ ಪಗಡೆ ವಯಾ: 23 ವರ್ಷ ಜಾ: ಲಿಂಗಾಯತ ಉ: ಇಂಜಿನಿಯರ್ ಸಾ: ಭೋದನ ಗ್ರಾಮ ತಾ:ಆಳಂದ ಇತನ ಕೊಲೆ ಮಾಡಿದ ಆರೋಪಿತನ ಪತ್ತೆಗಾಗಿ ಮಾನ್ಯ ಶ್ರೀ ಡಾ: ವಾಯ್ ಎಸ್ . ರವಿಕುಮಾರ  ಐಪಿಎಸ್ ಪೊಲೀಸ ಆಯುಕ್ತರು ಕಲಬುರಗಿ ನಗರ , ಶ್ರೀ ಅಡ್ಡುರು ಶ್ರೀನಿವಾಸಲು ಐಪಿಎಸ್ ಡಿ.ಸಿ.ಪಿ (ಕಾ&ಸೂ) ಕಲಬುರಗಿ ನಗರ, ಶ್ರೀ ಶ್ರೀಕಾಂತ ಕಟ್ಟಿಮನಿ ಡಿ.ಸಿ.ಪಿ ( ಅ.ವಿ & ಸಂಚಾರ)  ಮತ್ತು ಶ್ರೀ ಜೆ.ಎಚ್ ಇನಮಾದಾರ ಎ.ಸಿ.ಪಿ ಸಿ ಉಪವಿಭಾಗ ರವರ ಮಾರ್ಗದರ್ಶನದಲ್ಲಿ ಶ್ರೀ ಭಾಸು ಚವ್ಹಾಣ ಪಿಐ ಗ್ರಾಮೀಣ ಠಾಣೆ ರವರ ನೇತೃತ್ವದಲ್ಲಿ ಗ್ರಾಮೀಣ ಠಾಣೆಯ ಕವಿತಾ ಚವ್ಹಾಣ ಪಿಎಸ್ಐ (ಕಾ&ಸೂ) , ಶ್ರೀ ಎಂ.ಎ ಬೇಗ ಎಎಸ್ಐ, ಶಿವಶರಣಪ್ಪಾ ಹೆಚ್‌ಸಿ 79, ಅಂಬಾಜಿ ಪಿಸಿ 954, ಮಲ್ಲಿಕಾರ್ಜುನ ಪಿಸಿ 825 , ಪ್ರಕಾಶ ಪಿಸಿ 66, ನಾಗಂದ್ರ ಪಿಸಿ 86  , ಅನೀಲ ಪಿಸಿ 250, ಶರಣಬಸಪ್ಪ ಸಿಪಿಸಿ 105, ಪ್ರಶಾಂತ ಪಿಸಿ 892, ಚೆನ್ನಬಸಯ್ಯಾ ಪಿಸಿ 1262 , ಶ್ರೀನಾಥ ಪಿಸಿ 99, ಶಿವಾನಂದ ಪಿಸಿ 79 ರವರನ್ನು ಒಳಗೊಂಡ ಪ್ರತ್ಯೇಕವಾಗಿ ತಂಡಗಳನ್ನು  ರಚಿಸಿಕೊಂಡು ಕೊಲೆ ಮಾಡಿದ ಆರೋಪಿತರಾದ  1) ಶರಣಬಸವ ತಂದೆ ಹಣಮಂತರಾವ ಕಾಂದೆ ವಯಾ: 39 ವರ್ಷ ಸಾ: ತಂಬಕವಾಡಿ ಹಾ:ವ: ಆಳಂದ ಕಾಲೋನಿ ಕಲಬುರಗಿ 2)ಚೆನ್ನವೀರ @ ಚೆನ್ನಪ್ಪ ತಂದೆ ನಾಗೀಂದ್ರಪ್ಪ ಕಾಂದೆ ವಯಾ: 25 ವರ್ಷ ಸಾ: ಸಾ: ತಂಬಕವಾಡಿ ಹಾ:ವ: ಆಳಂದ ಕಾಲೋನಿ ಕಲಬುರಗಿ 3) ಬಸಲಿಂಗಪ್ಪ ತಂದೆ ಶರಣಪ್ಪಾ ಕಮಲಾಪೂರ ವಯಾ: 33 ವರ್ಷ ಸಾ: ಜೆಂಗಷನ ವಾಡಿ ತಾ:ಚಿತ್ತಪೂರ  ಇವರ ಪತ್ತೆಗಾಗಿ ಪತ್ತೆ ಕಾರ್ಯದಲ್ಲಿ ಇರುವಾಗ  ದಿನಾಂಕ 21/06/2021 ರಂದು ಬುಲೆರೋ ನೇದ್ದರಲ್ಲಿ ಶೆಟ್ಟಿ ಟಾಕೀಜ ಹತ್ತಿರ ಇರುವ ಬಗ್ಗೆ ಬಾತ್ಮಿ ಮೇರೆಗೆ ಅಧಿಕಾರಿ ಮತ್ತು ಸಿಬ್ಬಂದಿಯವರು ಆರೋಪಿತರನ್ನು ಹಿಡಿದು ದಸ್ತಗಿರಿ ಮಾಡಿದ್ದು ಸದರಿ ಆಪಾದಿತರನ್ನು ವಿಚಾರಣೆ ಕಾಲಕ್ಕೆ ಮೃತನು ಆಪಾದಿತ ಶರಣಬಸವ ಕಾಂದೆ ಇತನ ಹೆಂಡತಿಗೆ ಪದೆ ಪದೆ ಮನೆಗೆ ಬಂದು ಚುಡಾಯಿಸುತ್ತಿದ್ದರಿಂದ ಆಪಾದಿತರು  ತಮ್ಮ ಬುಲೆರೋ ವಾಹನದಲ್ಲಿ ಅಪಹರಣ ಮಾಡಿಕೊಂಡು ಹೋಗಿ ಕಲ್ಲಿನಿಂದ ಹೊಡೆದು ಕೊಲೆ ಮಾಡಿ ಪೆಟ್ರೋಲ ಹಾಕಿ ಸುಟ್ಟಿರುತ್ತೇವೆ ಅಂತಾ ತಮ್ಮ ತಪ್ಪುಒಪ್ಪಿಕೊಂಡಿದ್ದು ಇರುತ್ತದೆ.

ಸದರಿ ಆಪಾದಿತರನ್ನು ದಿನಾಂಕ 21/06/2121 ರಂದು ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಕೈಕೊಂಡಿದ್ದು ಮತ್ತು ಆಪಾದಿತರು ಕೃತ್ಯಕ್ಕೆ ಉಪಯೋಗಿಸಿದ ಮುದ್ದೇ ಮಾಲುಗಳನ್ನು  ಜಪ್ತಿ ಪಡಿಸಿಕೊಂಡಿದ್ದು ಇರುತ್ತದೆ.

ಈ ಮೇಲಿನ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಯವರ ತಂಡದ ಪತ್ತೆ ಕಾರ್ಯಕ್ಕೆ  ಮಾನ್ಯ ಪೊಲೀಸ ಆಯುಕ್ತರು ಕಲಬುರಗಿ ನಗರ ರವರು ಮೆಚ್ಚುಗೆ ವ್ಯಕ್ತ ಪಡಿಸಿರುತ್ತಾರೆ.